ದಿನಾಂಕಃ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು**:** ವಾದಿ ಪರ ಶ್ರೀ ಎಂಜಿಕೆ ವಕೀಲರಿಂದ**:**</u>

ನಾನು, ನನ್ನ ಮತ್ತು ಎಲ್ಲಾ ಪ್ರತಿವಾದಿಯರ ಪರ ಸಾಕ್ಷಿ ಹೇಳುತ್ತಿದ್ದೇನೆ. ನಮ್ಮ ಕುಟುಂಬ ಹನಗಂಡಿ ಗ್ರಾಮಕ್ಕೆ ಸುಮಾರು 50-60 ವರ್ಷಗಳ ಹಿಂದೆ ಬಂದಿರುತ್ತದೆ. ನಾವು ಮೂಲತಃ ಕೊಲ್ಲಾಪೂರ ಜಿಲ್ಲೆಯ ಹಾತಕಲ್ಲಂಗಡಿ ತಾಲೂಕಿನ ಅಲಾಸ ಗ್ರಾಮದವರು ಎಂದರೆ ಸರಿಯಲ್ಲ. ಹನಗಂಡಿ ಗ್ರಾಮದಲ್ಲಿ ಅಲಾಸ ಎಂಬ ಅಡ್ಡ ಹೆಸರಿನವರು ಬಹಳ ಜನ ಇರುತ್ತೇವೆ. ವಾದಿಯರು ತೇರದಾಳ ಪಟ್ಟಣದವರು ಎಂದರೆ ಸರಿ. ದಾವಾ ಆಸ್ತಿ ಹನಗಂಡಿ ಗ್ರಾಮದಲ್ಲಿದೆ ಎಂದರೆ ಸರಿ. ದಾವಾ ಆಸ್ತಿ ದಸ್ತಗೀರಸಾಬ ಅಲಾಸ ಇವರಿಗೆ ಟೆನೆನ್ಸಿ ಮೂಲಕ ಬಂದಿರುತ್ತದೆ ಎಂದರೆ ಸರಿ. ನಾನು ದಸ್ತಗೀರಸಾಬ ಅಲಾಸ ಇವರನ್ನು ನೋಡಿರುತ್ತೇನೆ. 1948 ರಿಂದ ಸದರಿ ದಸ್ತಗೀರಸಾಬ ಅಲಾಸ ಇವರು ದಾವಾ ಆಸ್ತಿ ಸರ್ವೆ ನಂ.112, ಕ್ಷೇತ್ರ 22 ಎಕರೆ 23 ಗುಂಟೆಯಲ್ಲಿ ಗೇಣಿದಾರನಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿ. ಭೂ ನ್ಯಾಯ ಮಂಡಳಿ ಜಮಖಂಡಿ ಇವರು ದಸ್ತಗೀರಸಾಬ ಅಲಾಸ ಇವರ ಹೆಸರಿನಲ್ಲಿ ದಿನಾಂಕಃ 28-10-1976 ರಂದು ನಮೂನೆ ಸಂ.7 ನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ತದನಂತರ ಸರಕಾರದವರು ಅವರ ಹೆಸರಿನಲ್ಲಿ ದಿನಾಂಕಃ 26-10-1980 ರಂದು ನಮೂನೆ-10 ನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಂಪೂರ್ಣ ಆಸ್ತಿಗೆ ದಸ್ತಗೀರಸಾಬ ಅಲಾಸ ಪೂರ್ಣ ಮಾಲೀಕತ್ವ ಹೊಂದಿದ್ದರು ಎಂದರೆ ಸರಿ. ದಸ್ತಗೀರಸಾಬ ಅಲಾಸ ಇವರು 1984 ರಲ್ಲಿ ಮೃತಪಟ್ಟಿರುತ್ತಾರೆ. ದಸ್ತಗೀರಸಾಬ ಅಲಾಸ ಮೃತಪಟ್ಟ ನಂತರ ಅವರ ಮಕ್ಕಳು ವಾರಸಾ ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಂಇ ನಂ.1856 ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ದಸ್ತಗೀರಸಾಬ ಅಲಾಸ ಇವರ ಮಕ್ಕಳಾದ ವಾದಿಯರು ಅವರ ತಂದೆ ಮೃತಪಟ್ಟ ನಂತರ ವಾರಸಾ ಮಾಡಿಕೊಂಡು ಇವತ್ತಿನವರೆಗೆ ದಾವಾ ಆಸ್ತಿಯಲ್ಲಿ ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಸ್ವಾಧೀನತೆ ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ನಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾವು ಅಲಾಸ ಇವರ ಸಹೋದರರು ಎಂದು ಸುಳ್ಳಾಗಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು, ಉಪ ತಹಶೀಲ್ದಾರರು ತೇರದಾಳ ಇವರೊಂದಿಗೆ ಮಿಲಾಪೆಯಾಗಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಪಿ-3 ರಂತೆ ದಾಖಲೆ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ರ ದಾಖಲೆಯ ಡ ನಂಬರಗಳು ರದ್ದಾಗಿರುತ್ತವೆ ಎಂದರೆ ಸರಿ. ದಸ್ತಗೀರಸಾಬ ಅಲಾಸ ಇವರ ಕುಟುಂಬಕ್ಕೆ ನಾವು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿ. ನಮ್ಮ ಮತ್ತು ದಸ್ತಗೀರಸಾಬ ಮಧ್ಯೆ ದಾವಾ ಆಸ್ತಿಯ ವಿಷಯವಾಗಿ ಯಾವುದೇ ವ್ಯವಹಾರ ಆಗಿಲ್ಲ ಮತ್ತು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ವಾದಿಯರು ಆ ಮೊದಲು ಮೂಲ ದಾವಾ ಸಂ.92/2001, ಸಿವಿಲ್ ನ್ಯಾಯಾಲಯ ಬನಹಟ್ಟಿಯಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಅಧಿಕಾರ ವ್ಯಾಪ್ತಿಯ ಮೇರೆಗೆ ಸದರಿ ದಾವೆ ಈ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿ. ನಾವು ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳ ಬಗ್ಗೆ ಮಾಹಿತಿ ಇರುತ್ತದೆ. ದಸ್ತಗೀರಸಾಬ ಅಲಾಸ ಇವರು ವಾಟ್ನಿ ಮೂಲಕ ಆಸ್ತಿ ಬಿಟ್ಟುಕೊಟ್ಟಿರುವುದಾಗಿ ನಮ್ಮ ಪ್ರತಿವಾದ ಪತ್ರದಲಿ ಹೇಳಿರುವುದು ಸರಿಯಲ್ಲ, ಆದರೆ ಅವರು ಮಾರಾಟ ಮಾಡಿರುತ್ತಾರೆ. ದಸ್ತಗೀರಸಾಬ ಇವರು ದಾವಾ ಆಸ್ತಿ ಪೈಕಿ ಯಾವುದೇ ಕ್ಷೇತ್ರವನ್ನು ನಮಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಗೇಣಿ ಮೂಲಕ ಮಂಜೂರಾದ ಆಸ್ತಿ ಇರುವುದರಿಂದ 15 ವರ್ಷಗಳವರೆಗೆ ಪರಭಾರೆ ಮಾಡದಂತೆ ಷರತ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ. ದಸ್ತಗೀರಸಾಬ ಬರೆದುಕೊಟ್ಟ ಖರೀದಿ ಪತ್ರ ಹಾಜರಪಡಿಸಿಲ್ಲ, ಆದರೆ ಅವರು ಬರೆದುಕೊಟ್ಟ ದಾಖಲೆ ಹಾಜರಪಡಿಸಿರುತ್ತೇನೆ. ದಸ್ತಗೀರಸಾಬ ಇವರು ನಮಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಸ್ತಗೀರಸಾಬ ಇವರಿಗೆ ದಾಖಲೆ ಬರೆದುಕೊಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ವಿಷಯವಾಗಿ ನಾನು ಮತ್ತು ನನ್ನ ಸಹೋದರರು ಕೂಡಿಕೊಂಡು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.129/2005, 131/2005, 132/2005, 152/2005 ಮತ್ತು 153/2005 ಗಳನ್ನು ವಾದಿಯರ ಮೇಲೆ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ

ದಾವೆಗಳು ವಜಾಗೊಂಡಿರುತ್ತವೆ ಎಂದರೆ ಸರಿ. ಸದರಿ ತೀರ್ಪುಗಳ ವಿರುದ್ಧ ನಾವು ಆರ್.ಎ. ನಂ.49/2016 ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿ ಸಂ.49/2016 ನ್ನು ಇದೇ ನ್ಯಾಯಾಲಯದಲ್ಲಿ ದಿನಾಂಕಃ 26-10–2017 ರಂದು ವಜಾಗೊಂಡಿರುತ್ತದೆ ಎಂದರೆ ಸರಿ. ಆರ್.ಎ.ನಂ.49/2016 ರ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲಿ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದಲ್ಲ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ಸರಿ.

ದಾವಾ ಆಸ್ತಿಯ ನಮ್ಮ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಂಡ ಆದೇಶವನ್ನು ನಿಪಿ-52 ಮತ್ತು 53 ರಂತೆ ವಜಾಗೊಳಿಸಿರುತ್ತಾರೆ ಎಂದರೆ ಸರಿ. ಈಗ ದಾವಾ ಆಸ್ತಿಯ ಉತಾರೆ ವಾದಿಯರ ಹೆಸರಿನಲ್ಲಿದೆ ಎಂದರೆ ಸರಿ. ದಸ್ತಗೀರಸಾಬ ನಮಗೆ ಬರೆದಕೊಟ್ಟಿರುತ್ತಾರೆ ಎಂದು ಹೇಳಿದ ದಾಖಲೆ, ನೋಂದಣಿ ಅಲ್ಲದ ದಾಖಲೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ನಮಗೆ ದಾವಾ ಆಸ್ತಿಯ ಯಾವುದೇ ಅಧಿಕಾರಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-3 ರ ದಾಖಲೆಯನ್ನು ಜಿಲ್ಲಾಧಿಕಾರಿಗಳು ರದ್ದುಪಡಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾವು ಯಾವುದೇ ಕಬ್ಜಾ ಎಂದೂ ಹೊಂದಿಲ್ಲ ಹಾಗೂ ಆ ಬಗ್ಗೆ ಯಾವುದೇ ನ್ಯಾಯಾಲಯ ನಮ್ಮ ಪರವಾಗಿ ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ.

ನಮ್ಮ ಹಿರಿಯರಿಗೆ ಸೇರಿದ ಯಾವುದೇ ಆಸ್ತಿಗಳು ಇರುವುದಿಲ್ಲ. ದಸ್ತಗೀರಸಾಬ ಇವರ ಇತರ ಆಸ್ತಿಗಳಿಗೆ ಮತ್ತು ನಮಗೆ ಯಾವುದೇ ಸಂಬಂಧ ಇಲ್ಲ. ನಮ್ಮ ಮತ್ತು ದಸ್ತಗೀರಸಾಬ ಇವರ ಮಧ್ಯೆ ಜಮೀನು ಸರ್ವೆ ನಂ.202, 121/1 ಮತ್ತು 392/2 ರ ಮಧ್ಯೆ ಪಾಲು ವಿಭಾಗ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಖೊಟ್ಟಿ ದಾಖಲೆಗಳನ್ನು ಮಾಡಿಕೊಂಡು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ದಾವಾ ಆಸ್ತಿಯನ್ನು 7 ನೇ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದರಂತೆ 7 ನೇ ವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ರೈಲ್ವೆ ಹಚಿ ಹಾಯ್ದು ಹೋಗಿರುತ್ತದೆ ಎಂದರೆ ಸರಿ. ರೈಲ್ವೆ ಇಲಾಖೆಯಿಂದ ಪರಿಹಾರದ ಹಣವನ್ನು 7 ನೇ ವಾದಿ ಪಡೆದಿರುತ್ತಾರೆ ಎಂದರೆ ಸರಿ. 1 ರಿಂದ 3 ನೇ ವಾದಿಯರು ದಾವಾ ಆಸ್ತಿಯಲ್ಲಿರುವ ತಮ್ಮ ಹಕ್ಕನ್ನು 4 ನೇ ವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. 4 ನೇ ವಾದಿ ದಾವಾ ಆಸ್ತಿಯನ್ನು 7 ನೇ

ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮಗೂ ಸಹ ಮಾರಾಟ ಮಾಡಿರುವುದಾಗಿ ಹೇಳುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ